1. ಉದ್ದ L ಇರುವ ಸರಳ ಆಧಾರದ ತೊಲೆಯ ಗರಿಷ್ಠ ಬಾಗುವಿಕೆಯು ಅಡ್ಡ ವಿಭಾಗ A ಇದ್ದು ಏಕರೂಪದಲ್ಲಿ ವಿತರಣೆಯಾದ ಭಾರ W ಇದ್ದಾಗ__________

(1) $\frac{LW}{2}$

(2) $\frac{LW}{4}$

(3) $\frac{LW}{8}$

(4) $\frac{LW}{16}$

2. ತೆಳುವಾದ ನೀಳ ಸಿಲಿಂಡರಿನಲ್ಲಿನ ಅನುಪಾತ = $\frac{\text{ಹೂಪ್ ಒತ್ತಡ}}{\text{ನೀಳ ಒತ್ತಡ}}$ ಇಷ್ಟಿರುತ್ತದೆ.

(1) 1

(2) 2

(3) $\frac{1}{2}$

(4) $\frac{1}{3}$

3. 2% ಗಿಂತಲೂ ಅಧಿಕ ಕಾರ್ಬನ್ ಇರುವ ಕಬ್ಬಿಣ ಮಿಶ್ರಲೋಹದ ಹೆಸರು ________

(1) ಬೂದು ಕಬ್ಬಿಣ
(2) ಎರಕ ಕಬ್ಬಿಣ
(3) ಕಾರ್ಬನ್ ಉಕ್ಕು
(4) ಅಧಿಕ ಕಾರ್ಬನ್ ಉಕ್ಕು

4. ಸೂಕ್ಷ್ಮದರ್ಶಕದ ಪರಿಶೀಲನೆಯಿಂದ ತಿಳಿದು ಬಂದ ಅಂಶವೆಂದರೆ ತುಣುಕುಗಳು ತಿರುಚು ಪ್ರಕ್ರಿಯೆಯಲ್ಲಿ ರೂಪುಗೊಳ್ಳುವುದು ಈ ಕಡೆ ________

(1) ನೀಳ ಸಮತಲ
(2) ಸ್ಪರ್ಶಕ ಸಮತಲ
(3) ತಿರಿಚು ಸಮತಲ
(4) ಪ್ರಧಾನ ಸಮತಲ

5. ಎರಡು ಅಥವಾ ಅಧಿಕ ಘಟಕಗಳ ಸಂಯೋಜನೆಯಿಂದ ತಯಾರಾದ ವಸ್ತು ವ್ಯವಸ್ಥೆಯು ಪರಸ್ಪರ ಆಕೃತಿಯಲ್ಲಿ ಮತ್ತು ರಾಸಾಯನಿಕ ಸಂಯೋಜನೆಯಲ್ಲಿ ಭಿನ್ನವಾಗಿ ಪರಸ್ಪರ ಅವಿಲೀನಕವಾಗಿದ್ದರೆ ಅದು __________

(1) ಮಿಶ್ರಲೋಹ
(2) ಸಂಯುಕ್ತ
(3) ಸಂರಚನೆ
(4) ಕಾರ್ಬ್ಯುರೈಜಿಂಗ್

6. ಚಲನಗತಿ ಜೋಡಿ ಎಂದರೆ ________

(1) ಮೇಲ್ಮೈ ಅಂಶಗಳನ್ನುಳ್ಳ ಅಂಶಗಳ ಜೋಡಿ
(2) ಪರಸ್ಪರ ರೇಖೀಯ ಇಲ್ಲವೆ ಬಿಂದು ಸಂಪರ್ಕವುಳ್ಳ ಅಂಶಗಳ ಜೋಡಿ
(3) ಸಾಪೇಕ್ಷ ಚಲನೆಗೆ ಅನುವು ಮಾಡಿಕೊಡುವ ಎರಡಂಶಗಳು
(4) ಗತಿಶೀಲವಾಗಿ ಒಟ್ಟಿಗಿರಿಸಿದ ಎರಡು ಅಂಶಗಳು

7. ಹಾರ್ಟ್‌ನೆಲ್ ಗವರ್ನರ್ ಇದಕ್ಕೆ ಅತ್ಯುತ್ತಮ ಉದಾಹರಣೆ __________

(1) ಸೆಂಟ್ರಿಫ್ಯೂಗಲ್ ಮಾದರಿ ಗವರ್ನರ್
(2) ಜಡಭಾರ ಮಾದರಿ ಗವರ್ನರ್
(3) ಜಡತ್ವ ಮಾದರಿ ಗವರ್ನರ್
(4) ಲೋಲಕ ಮಾದರಿ ಗವರ್ನರ್

8. ಯಾವುದೇ ವಾಹಿಯ ಆದರ್ಶ ಪ್ರವಹನವು ಹೊಂದಿರಬೇಕಾದ ಲಕ್ಷಣ ________

(1) ನ್ಯೂಟನ್‌ನ ಸ್ನಿಗ್ಧತಾ ನಿಯಮ
(2) ಅಂಚು ಪದರ ಸಿದ್ಧಾಂತ
(3) ಪಾಸ್ಕಲ್‌ನ ನಿಯಮ
(4) ನಿರಂತರತಾ ಸಮೀಕರಣ

9. ಪದರ ಪ್ರವಹನದಲ್ಲಿ ________

(1) ರೆನಾಲ್ಡ್ ಸಂಖ್ಯೆ ಅಧಿಕ.
(2) ವಾಹಿಕಣಗಳು ಅಡ್ಡಾದಿಡ್ಡಿ ಚಲಿಸುವುವು.
(3) ಅಂಚಿಗೆ ಸಮಾಂತರವಾಗಿ ವಾಹಿಕಣಗಳು ಚಲಿಸುವುವು.
(4) ರಿನಾಲ್ಡ್ ಮತ್ತು ನಸಲ್ಟ್ ಸಂಖ್ಯೆ ಅಧಿಕ.

10. ಬಾಲ್‌ಪೆನ್ನು ಕಾರ್ಯನಿರ್ವಹಣೆ ಮಾಡುವ ತತ್ವ ________

(1) ಅಣುಗಳ ಸಂಸಂಜನ ಮತ್ತು ಸಂಸಕ್ತಿ
(2) ಮೇಲ್ಮೈ ಸೆಳೆತ
(3) ಸ್ನಿಗ್ಧತೆ
(4) ಗುರುತ್ವ ಬಲ

11. ಗಾಳಿಶಿಷ್ಟ ಡೀಸೆಲ್ ಇಂಜಿನಿನಲ್ಲಿ ನಿರ್ದಿಷ್ಟ ಸಂಪೀಡನ ಒತ್ತಡದಲ್ಲಿ ಮತ್ತು ಸಮ ಉಷ್ಣ ಸೂಚ್ಯಂಕದಲ್ಲಿ ________

(1) ಉಷ್ಣ ದಕ್ಷತೆ ಹೆಚ್ಚುವುದು, ಉಷ್ಣ ಸೇರ್ಪಡೆ ಕಡಿತ ಅನುಪಾತದ ಹೆಚ್ಚಳಕ್ಕೆ ಅನುಗುಣವಾಗಿ
(2) ಉಷ್ಣ ದಕ್ಷತೆ ತಗ್ಗುವುದು, ಉಷ್ಣ ಸೇರ್ಪಡೆ ಕಡಿತ ಅನುಪಾತದ ಹೆಚ್ಚಳಕ್ಕೆ ಅನುಗುಣವಾಗಿ
(3) ಉಷ್ಣ ದಕ್ಷತೆ ಅಷ್ಟೇ ಉಳಿಯುವುದು, ಉಷ್ಣ ಸೇರ್ಪಡೆ ಕಡಿತ ಅನುಪಾತದ ಹೆಚ್ಚಳವಾದರೂ
(4) ಈ ಮೇಲಿನ ಯಾವುವೂ ಅಲ್ಲ.

12. ಬ್ರೇಕ್ ಪವರ್ ಅನ್ನು ಅಳೆಯುವುದು ಪ್ರೋನಿ ಬ್ರೇಕ್‌ನಿಂದ ಈ ಸಾಧನ ಕುರಿತಂತೆ ________

(1) ಕಡಿಮೆ ವೇಗ ಇಂಜಿನ್
(2) ಕಡಿಮೆ ಸಾಮರ್ಥ್ಯ ಇಂಜಿನ್
(3) ವ್ಯತ್ಯಯನೀಯ ವೇಗ ಇಂಜಿನ್
(4) ಅಧಿಕ ವೇಗ ಇಂಜಿನ್

13. ಬಾಹ್ಯ ಜ್ವಾಲೆ ಇಲ್ಲದೆ ಇಂಧನವು ಹತ್ತಿಕೊಳ್ಳುವ ವಿಧಾನವೆಂದರೆ ________

(1) ಸ್ಫೋಟ
(2) ಹೊತ್ತಿಕೊಳ್ಳುವ ಪೂರ್ವ
(3) ತಾಡನ (ನಾಕಿಂಗ್)
(4) ಸ್ವಯಂ ಹೊತ್ತಿಕೊಳ್ಳುವಿಕೆ

14. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಬಳಕೆ ಆಗುವ ಕಾರಿನ ಬ್ಯಾಟರಿಗಳು ________

(1) ನಿಕ್ಕಲ್ ಕ್ಯಾಡ್ಮಿಯಮ್ ಬ್ಯಾಟರಿ
(2) ಲೆಡ್ ಆಸಿಡ್ ಬ್ಯಾಟರಿ
(3) ನಿಕ್ಕಲ್ ಕಬ್ಬಿಣ ಬ್ಯಾಟರಿ
(4) ಶುಷ್ಕ ಬ್ಯಾಟರಿ

15. ಭಾರತದಲ್ಲಿ ಸಾಮಾನ್ಯವಾಗಿ ಸ್ವಯಂಚಾಲಿತಗಳಲ್ಲಿ ಬಳಕೆ ಆಗುವ ಚರಬಿ ಎಣ್ಣೆ ಎಂದರೆ ________

(1) ಪ್ರಾಣಿ ಜನ್ಯ ಎಣ್ಣೆ
(2) ಖನಿಜ ಎಣ್ಣೆ
(3) ಸಸ್ಯಜನ್ಯ ಎಣ್ಣೆ
(4) ಸಂಶ್ಲೇಷಿತ ಎಣ್ಣೆ

16. ____________ ಇದನ್ನು ಉತ್ಪಾದಕದ (ಜನರೇಟರ್) ಉತ್ಪಾದನೆಯನ್ನು ಸುರಕ್ಷಿತ ಮಿತಿಯಲ್ಲಿ ನಿಯಂತ್ರಿಸಲು, ಬ್ಯಾಟರಿ ಜೀವಿತವನ್ನು ತಡೆಗಟ್ಟಲು ಅಥವಾ ಅಧಿಕಗೊಳಿಸಲು ಬಳಕೆ ಮಾಡಲಾಗುವುದು.

(1) ಸಂಜ್ಞಾ ಪರಿವರ್ತಕಗಳು (ಟ್ರಾನ್ಸ್‌ಡ್ಯೂಸರ್ಸ್ )
(2) ಸಂವೇದಕಗಳು
(3) ನಿಯಂತ್ರಕಗಳು
(4) ಉತ್ಪಾದಕಗಳು (ಜನರೇಟರ್)

17. ಬೀಡು ಕಬ್ಬಿಣದ ಮಾದರಿಯನ್ನು ತುಯ್ತದ ಪರೀಕ್ಷೆಗೆ ಒಳಪಡಿಸಿದಾಗ ಅಡ್ಡ ಕೊಯ್ತ ವಿಸ್ತೀರ್ಣದ ಶೇಕಡಾವಾರು ತಗ್ಗಿಕೆ ________

(1) 50%
(2) 25%
(3) 5%
(4) 0%

18. ಎಲ್ಲ ದಿಕ್ಕಿನಲ್ಲೂ ಅದೇ ಸ್ಥಿತಿ ಸ್ಥಾಪಕ ಲಕ್ಷಣವಿರುವ ವಸ್ತುಗಳನ್ನು ಹೀಗೆಂದು ಕರೆಯುತ್ತಾರೆ.

(1) ಸ್ಥಿತಿಸ್ಥಾಪಕ ವಸ್ತುಗಳು
(2) ಸಮವರ್ತಿತ್ವ (ಐಸೋಟ್ರೋಫಿಕ್) ವಸ್ತುಗಳು
(3) ಏಕರೂಪ ವಸ್ತುಗಳು
(4) ಆದರ್ಶ ವಸ್ತುಗಳು

19. ತಟ್ಟೆಗಳು ಮತ್ತು ಹಾಳೆಗಳಾಗಿ ರೂಪಿಸಬಲ್ಲ ವಸ್ತುಗಳ ಗುಣಲಕ್ಷಣವೆಂದರೆ ________

(1) ಪತ್ರಶೀಲತೆ
(2) ತಂತುಶೀಲತೆ
(3) ರೂಪತಳೆಯುವ ಗುಣ (ಮೆತ್ತಗಾಗುವ)
(4) ಸ್ಥಿತಿಸ್ಥಾಪಕತೆ

20. ವಿಶ್ರಾಂತ ಸ್ಥಿತಿಯಿಂದ ಅಥವಾ ಚಲನೆಯಿಂದ ಸ್ಥಿತ್ಯಂತರಗೊಳ್ಳಲು ಉಳ್ಳ ಪ್ರತಿರೋಧ ಪ್ರವೃತ್ತಿಯನ್ನು __________ ಎನ್ನಲಾಗುವುದು.

(1) ಜಡತೆ
(2) ದ್ರವ್ಯರಾಶಿ
(3) ಘರ್ಷಣೆ
(4) ಪ್ರತಿರೋಧ ಬಲ

21. ದಂಡಗಳು ಸಾಲಾಗಿ ಇಲ್ಲವೆ ಸಮಾಂತರವಾಗಿ ಇಲ್ಲವಾದಾಗ ಯುಗ್ಮನದ ಬಗೆಯೆಂದರೆ ________

(1) ಸರಪಳಿಯುಗ್ಮನ
(2) ಸಾರ್ವತ್ರಿಕ ಯುಗ್ಮನ
(3) ಓಲ್ಡ್‌ಹ್ಯಾಮ್ ಯುಗ್ಮನ
(4) ನಮ್ಯಯುಗ್ಮನ

22. ಸ್ನಿಗ್ಧತೆಯ ಮಾಪನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದು ಅಪ್ರಸ್ತುತ ?

(1) ರೆಡ್‌ವುಡ್
(2) ಎಂಗ್ಲರ್
(3) ಸೆಬೋಲ್ಟ್
(4) ಒರ್ಸಾಟ್

23. ' ಪಾಯ್ಸ್ ' ಯು ________ ಇದರ ಏಕಮಾನ.

(1) ಮೇಲ್ಮೈ ಸೆಳೆತ
(2) ಮೇಲ್ಮುಖ ಒತ್ತಡ
(3) ಸ್ನಿಗ್ಧತೆ
(4) ಲೋಮತೆ

24. ಎಂಟ್ರಾಪಿ (ರವಾನೆ ಪ್ರಮಾಣ) ಬದಲಾವಣೆಯು ಅವಲಂಬಿಸಿರುವುದು ________ ಮೇಲೆ.

(1) ಉಷ್ಣ ವರ್ಗಾವಣೆ
(2) ರಾಶಿ ವರ್ಗಾವಣೆ
(3) ಒತ್ತಡ ಮತ್ತು ಗಾತ್ರ ಬದಲಾವಣೆ
(4) ತಾಪದ ಬದಲಾವಣೆ

25. ಸ್ಟೀರಿಂಗ್‌ನ ಟೈ ರಾಡ್‌ನ ತುದಿಯಲ್ಲಿ ಬಾಲ್ ಜಾಯಿಂಟ್‌ಗಳನ್ನು ಬಳಕೆ ಮಾಡುವುದೇಕೆಂದರೆ ಅವು ______________

(1) ಶಬ್ದವನ್ನು ಕಡಿಮೆ ಮಾಡುತ್ತದೆ.
(2) ಜಾರಿಕೆ ಪ್ರತಿರೋಧವನ್ನು ತಗ್ಗಿಸುತ್ತದೆ.
(3) ಇತರ ದಿಕ್ಕಿನಲ್ಲಿ ನಿಲಂಬನೆಯ ಚಲನೆಗೆ ಸಹಾಯಕ.
(4) ಬಲ ಪ್ರಸಾರವನ್ನು ಸುಧಾರಿಸುತ್ತದೆ.

26. ಅಂತರ್ದಹನ ಯಂತ್ರದ ಸ್ಟ್ರೋಕ್ ____________

(1) ಟಿಡಿಸಿ ಮತ್ತು ಬಿಡಿಸಿಗಳ ನಡುವಣ ಅಂತರ
(2) ಸಿಲಿಂಡರಿನ ಗಾತ್ರ
(3) ಸಿಲಿಂಡರಿನ ಉದ್ದ
(4) ಕೊಂತದ (ಪಿಸ್ಟನ್‌ನ) ಉದ್ದ

27. ಸಂಪರ್ಕ ದಂಡಗಳನ್ನು ಉತ್ಪಾದಿಸುವ ಬಗೆ _________

(1) ಎರಕನ
(2) ಕ್ಯಾಸ್ಟಿಂಗ್
(3) ಬೆಸುಗೆ
(4) ಮೆಶಿನಿಂಗ್

28. ಎಂಜಿನ್ನಿನ ಕವಾಟಕ್ಕೆ ಕ್ಯಾಮ್ ದಂಡದ ಚಲನೆಯ ವರ್ಗಾವಣೆ ಈ ಮೂಲಕ ________

(1) ರಾಕರ್ ಆರ್ಮ್
(2) ಕೊಂತ
(3) ಪುಲ್ಲಿ
(4) ವಾಲ್ವ್ ಸ್ಟೆಮ್

29. ಇನ್‌ಲೈನ್ ನಾಲ್ಕು ನಳಿಗೆ ಎಸ್.ಐ. ಇಂಜಿನ್ನಿನ ಫೈರಿಂಗ್ ಕ್ರಮವು (ಆರ್ಡರ್) ________

(1) a ï b ï c ï d
(2) a ï b ï d ï c
(3) a ï c ï d ï b
(4) a ï c ï b ï d

30. ಮೃದು ಉಕ್ಕಿನ ಸ್ಥಿತಿ ಸ್ಥಾಪಕ ಮಾಡ್ಯುಲಸ್‌ನ ಸರಿಸುಮಾರು ಮೌಲ್ಯ ________

(1) 205 GPa
(2) 100 MPa
(3) 100 GPa
(4) 205 MPa

31. ಉಷ್ಣ ಒತ್ತು ಅವಲಂಬಿಸುವುದು ________

(1) ತಾಪ ಪರಿವರ್ತನೆ
(2) ರೇಖೀಯ ವ್ಯಾಕೋಚನ ಗುಣಾಂಕ
(3) ಯಂಗ್‌ನ ಮಾಡ್ಯುಲಸ್
(4) ಈ ಎಲ್ಲವೂ

32. ಗರಿಷ್ಠ ಸಾಮರ್ಥ್ಯ ವರ್ಗಾವಣೆ ಬೆಲ್ಟ್‌ಡ್ರೈವಿಂದ ಆಗಬೇಕಾದರೆ ಇರಬೇಕಾದ ಗರಿಷ್ಠ ತುಯ್ತ ________

(1) 2/3 Tc
(2) Tc / 3
(3) 3Tc
(4) 2Tc

33. ಮ್ಯಾಚ್‌ನಂಬರ್ ಇಷ್ಟಿದ್ದಾಗ ಅನಿಲಗಳು ಅಸಂಪೀಡನೀಯವೆಂದು ಪರಗಣಿಸಲಾಗುವುದು.

(1) 1.0
(2) 0.5
(3) > 0.3
(4) < 0.2

34. ರೇನಾಲ್ಡ್ ಸಂಖ್ಯೆ ಇಷ್ಟಿದ್ದಾಗ ಪೈಪ್‌ಗಳಲ್ಲಿನ ಹರಿವು ________

(1) 2500
(2) 4000
(3) >2500
(4) ಇವ್ಯಾವುವೂ ಅಲ್ಲ

35. ಕೇಂದ್ರ ಭಾರ W ವನ್ನು ವಾಟ್ ಗವರ್ನರ್‌ನ ಸ್ಲೀವ್‌ಗೆ (ಕೊಳವೆ) ಸೇರಿಸಿದಾಗ ಗವರ್ನರ್‌ನ ಎತ್ತರ ಹೆಚ್ಚಳದ ಅನುಪಾತ ________

(1) (W + w) / w
(2) w / (W + w)
(3) Sqrt { (W + w) / w }
(4) 2 (W + w) / w

W - ಸ್ಲೀವ್‌ನ ಭಾರ

36. ಕ್ಯಾಮ್ ಗಾತ್ರ ಇದನ್ನವಲಂಬಿಸಿದೆ ________

(1) ಪಿಚ್ ಸರ್ಕಲ್
(2) ಬೇಸ್ ಸರ್ಕಲ್
(3) ಕ್ಯಾಮ್ ಸರ್ಕಲ್ ï ಕ್ಯಾಮ್‌ಪ್ರೊಫೈಲನ್ನು ಆವರಿಸುವಂತಹುದು
(4) ಕ್ಯಾಮ್‌ನ ಕಾರ್ಯನಿರ್ವಾಹಕ ವೇಗ

37. ಕಾರ್ನೊಟ್ ಚಕ್ರವು 100% ದಕ್ಷತೆಯಿಂದಿರಲು ________

(1) ಇಂಜಿನ್ ಅನಂತ ವೇಗದಲ್ಲಿ ಚಲಿಸಬೇಕು.
(2) ಬಳಕೆಯಾಗುವ ದ್ರವ್ಯ ಪರಿಶುದ್ಧ ಇರಬೇಕು.
(3) ಆಕರ ಮತ್ತು ಕುಸಿತ ತಾಪಮಾನಗಳು ಅನುಕ್ರಮವಾಗಿ $500^0$ C ಮತ್ತು $0^0$ C ಇರಬೇಕು.
(4) ಆಕರದ ತಾಪ ಏನೇ ಇರಲಿ ಉಷ್ಣ ತ್ಯಜಿಕ $0^0$ K ತಾಪದಲ್ಲಿರಬೇಕು.

38. ಕೇಂದ್ರ ಬಿಂದು ಭಾರದ ಆಧಾರ ಮೂಲದ ಗರಿಷ್ಠ ವಿಮುಖತೆಯು ______

(1) $Wl^3 / 4EI$
(2) $Wl^3 / 8EI$
(3) $Wl^3 / 24EI$
(4) $Wl^3 / 48EI$

39. ಕಾರ್ಯನಿರತ ಭಾರಕ್ಕೂ ಕುಸಿತ ಒತ್ತಡಕ್ಕೂ ಇರುವ ಅನುಪಾತ ______

(1) ಇಳುವರಿ ಅಂಶ
(2) ಭಾರ ಅಂಶ
(3) ಸುರಕ್ಷತಾ ಅಂಶ
(4) ಆಕಾರ ಅಂಶ

40. ಸ್ವಯಂಚಾಲಿತ ವಾಹನಗಳ ಸಂಪರ್ಕ ಸರಳುಗಳನ್ನು ಬೃಹತ್ತಾಗಿ ಉತ್ಪಾದಿಸುವುದು.

(1) ಮರಳು ಎರಕದಲ್ಲಿ
(2) ಅಚ್ಚು ಎರಕದಲ್ಲಿ
(3) ಎರಕದಲ್ಲಿ
(4) ಶೀತಲ ಹೆಡಿಂಗ್‌ನಲ್ಲಿ

41. ಕನಿಷ್ಠ ಹಲ್ಲುಗಳ ಸಂಖ್ಯೆಯು ಇದನ್ನು ತಪ್ಪಿಸಲು ______

(1) ಪರಿಣಾಮಕ ಭಾರ
(2) ಸವಕಳಿ
(3) ಅಡ್ಡ ಬರುವಿಕೆ
(4) ಕಚ್ಚು

42. ಪೆಟ್ರೋಲ್ ಇಂಜಿನ್ನಿನ ವಿದ್ಯುತ್ ಕಿಡಿ ಪ್ಲಗ್ಗಿನ ವಿದ್ಯುತ್ ಕಿಡಿಕಾರಕ ವೋಲ್ಟೇಜು ______

(1) 500 to 1000 volt
(2) 1000 to 5000 volt
(3) 5000 to 8000 volt
(4) 10000 to 15000 volt

43. (L) ಉದ್ದದ ಕಾಂಟಿಲೀವರ್ ಬಿಂದು ಭಾರ (W) ವನ್ನು ಮುಕ್ತ ತುದಿಯಲ್ಲಿ ಪಡೆದಿದೆ. ಬಾಗುವಿಕೆ ಭ್ರಾಮಕ ನಕಾಶೆಯು ________

(1) ತೊಲೆಯ ಮಧ್ಯಭಾಗದಲ್ಲಿ ಗರಿಷ್ಠ ಆರ್ಡಿನೇಟ್ ಇರುವ ಪೆರಾಬೊಲ
(2) ಕಾಂಟಿಲೀವರ್ ತುದಿಯಲ್ಲಿ ಗರಿಷ್ಠ ಆರ್ಡಿನೇಟ್ ಇರುವ ಪೆರಾಬೊಲ
(3) ಮುಕ್ತ ತುದಿಯಲ್ಲಿ ಗರಿಷ್ಠ ಆರ್ಡಿನೇಟ್ ಇರುವ ತ್ರಿಭುಜ
(4) ಕಾಂಟಿಲೀವರ್ ತುದಿಯಲ್ಲಿ ಗರಿಷ್ಠ ಆರ್ಡಿನೇಟ್ ಇರುವ ತ್ರಿಭುಜ

44. ಬಹುದೂರದವರೆಗೆ ರಂಧ್ರ ಕೊರೆಯಲು ಬಳಕೆ ಆಗುವ ಕೊರೆಯುವ ಸಾಧನವು ________

(1) ಪಟ್ಟಿಯೊಂದರಲ್ಲಿನ ಏಕ ಉಪಕರಣ ಬಿಟ್ (bit)
(2) ತದ್ವಿರುದ್ಧ ದಿಕ್ಕಿನಲ್ಲಿ ಜೋಡಣೆ ಆಗಿರುವ ಎರಡು ಉಪಕರಣ ಬಿಟ್
(3) 4 ಉಪಕರಣ ಬಿಟ್‌ಗಳು
(4) 3 ಉಪಕರಣ ಬಿಟ್‌ಗಳು

45. ಒತ್ತಡ ಹಾಕುವ ಬಲಕ್ಕೂ ಕತ್ತರಿಸುವ ಬಲಕ್ಕೂ ಅನುಪಾತ 2.5 ಇದರಲ್ಲಿ ________

(1) ಟರ್ನಿಂಗ್
(2) ಬ್ರೋಚಿಂಗ್
(3) ಪುಡಿ ಮಾಡುವಿಕೆ
(4) ಸಮತಲಗೊಳಿಸುವಿಕೆ

46. ಸರಿಯಾಗಿ ಹೊಂದಾಣಿಕೆ ಆಗದ ಜೋಡಿ ಯಾವುದು ?

(1) ಧನಾತ್ಮಕ ಡ್ರೈವ್ – ಬೆಲ್ಟ್ ಡ್ರೈವ್
(2) ಅಧಿಕ ವೇಗ ಅನುಪಾತ ï ವಾರ್ಮ್‌ಗೇರಿಂಗ್
(3) ಸಮಾಂತರವಲ್ಲದ ಪರಸ್ಪರ ಛೇದಿಸದ ದಂಡಗಳ ಸಂಪರ್ಕ – ಸ್ಪೈರಲ್ ಗೇರಿಂಗ್
(4) ತಗ್ಗಿದ ಸದ್ದು ಹಾಗೂ ನಯವಾದ ಕಾರ್ಯನಿರ್ವಹಣೆ – ಹೆಲಿಕಲ್ ಗೇರ್

47. ಈ ಪೈಕಿ ಅತ್ಯಂತ ಅಸಮಂಜಸವಾದ ವಿಧಾನವು, ರಂಧ್ರ ಗುಣಾಂಕಕ್ಕೆ ಸಂಬಂಧಿಸಿದ್ದೆಂದರೆ ________

(1) Cd ಕಂಡುಹಿಡಿಯಲು ಬಳಕೆಯಾಗುವಾಗ ಖಾಲಿಗೊಳಿಸುವ ಸಮಯ ವಿಧಾನ
(2) Cv ಕಂಡುಹಿಡಿಯಲು ಬಳಕೆಯಾಗುವ ಜೆಟ್‌ಪಥ ವಿಧಾನ
(3) Cc ಕಂಡುಹಿಡಿಯಲು ಸಂವೇಗ ವಿಧಾನ
(4) Cd ಕಂಡುಹಿಡಿಯಲು ಪೈಟಟ್ ವಿಧಾನ

48. ಸ್ಥಿರ ಒತ್ತಡದ ವಿಶಿಷ್ಠೋಷ್ಣವು Cp ಮತ್ತು ಸ್ಥಿರ ಗಾತ್ರ ಒತ್ತಡವು Cv ಆಗಿದ್ದಾಗ ________

(1) Cp < Cv
(2) Cp = Cv
(3) Cp > Cv
(4) ಈ ಬಗೆಯ ಸಂಬಂಧ ಇಲ್ಲ.

49. ಅಂತರ್ದಹನ ಯಂತ್ರದಲ್ಲಿ ನಾಕಿಂಗ್ ತಾಡನದ ಪ್ರವೃತ್ತಿಯು ಹೆಚ್ಚಳವಾಗುವ ಪ್ರವೃತ್ತಿ ಇದರೊಡನೆ ಅವಲಂಬಿತವಿರುವುದು.

(1) ಸಂಪೀಡನಾನುಪಾತದ ತಗ್ಗಿಕೆ
(2) ಸಂಪೀಡನಾನುಪಾತದ ಹೆಚ್ಚಳ
(3) ಒಳಹರಿವು ಗಾಳಿಯ ತಾಪ ಹೆಚ್ಚಳ
(4) ಶೀತಕ ನೀರಿನ ತಾಪ ಹೆಚ್ಚಳ

50. 12 volt ಕಾರು ಬ್ಯಾಟರಿಯಲ್ಲಿ ಅಳವಡಿಸಿರುವ ವಿದ್ಯುತ್ಕೋಶಗಳ ಸಂಖ್ಯೆ ಎಷ್ಟು ?

(1) 2
(2) 4
(3) 6
(4) 8